MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 28-6-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## 2022 ಪ್ರಥಮ 5 ತಿಂಗಳಲ್ಲಿ ವಿಯೆಟ್ನಾಂನ ಗೋಡಂಬಿ ರಫ್ತು ಇಳಿಕೆ

ಹಿಂದಿನ ವರ್ಷಕ್ಕೆ ಹೋಲಿಸಿದಾಗ ವಿಯೆಟ್ನಾಂ ನಿಂದ 2022 ರಲ್ಲಿ ಗೋಡಂಬಿ ರಫ್ತು ಗಾತ್ರದಲ್ಲಿ 7.81 ಶೇಕಡಾ ಹಾಗೂ ಮೌಲ್ಯದಲ್ಲಿ 6.81 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ಈ ವರ್ಷ ವಿಯೆಟ್ನಾಂನಿಂದ ಗೋಡಂಬಿ ತಿರುಳು ರಫ್ತು ಹಿಂದಿನ ವರ್ಷಕ್ಕಿಂತ ಕಡಿಮೆಯಾಗಬಹುದೆನ್ನಲಾಗಿದೆ. ದರ 1.45 ಶೇಕಡಾ ವೃದ್ಧಿಯಾಗಿದ್ದು, ಸರಾಸರಿ ಟನ್‌ಗೆ $ 5792 ಆಗಿದೆಯೆನ್ನಲಾಗಿದೆ. ವಿಯೆಟ್ನಾಂ 968,000 ಟನ್ ಕಚ್ಚಾ ಗೋಡಂಬಿ ಆಮದು ಮಾಡಿಕೊಂಡಿದ್ದು ಆದರ ಮೊತ್ತ $ 1.4 ಬಿಲಿಯನ್ (35.24 ಶೇಕಡಾ ಇಳಿಕೆ) ಹಾಗೂ ಗಾತ್ರದಲ್ಲಿ 37.84 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ಆಮದು ಕಚ್ಚಾ ಗೋಡಂಬಿ ದರ 15–20 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದೆ. ವಿಯೆಟ್ನಾಂ 2022 ರ ಪ್ರಥಮ 5 ತಿಂಗಳಲ್ಲಿ 206,000 ಟನ್‌ಗಳಿಗೂ ಹೆಚ್ಚು ಗೋಡಂಬಿ ತಿರುಳು ($ 1.19) ರಫ್ತು ಮಾಡಿದೆಯೆನ್ನಲಾಗಿದೆ.

## ಮಲೇಶೀಯನ್ ಪಾಮೆಣ್ಣೆ ಫ್ಯೂಚರ್ ದರ ಇಳಿಕೆ

ನಿನ್ನೆ ಹೆಚ್ಚಳಗೊಂಡಿದ್ದ ಮಲೇಶೀಯನ್ ಪಾಮೆಣ್ಣೆ ಫ್ಯೂಚರ್ ದರ ಇಂದು ಮತ್ತೆ ಇಳಿಕೆಯಾಗಿದೆಯೆನ್ನಲಾಗಿದೆ. ಉತ್ಪಾದನೆ ಹೆಚ್ಚಳವಾಗುವ ನಿರೀಕ್ಷೆಯಿಂದ ದರ ಮತ್ತೆ ಇಳಿಕೆಯಾಗಿದೆಯೆನ್ನಲಾಗಿದೆ. ಜೂನ್ 18 ರಿಂದ 25 ರ ತನಕ ಪಾಮೆಣ್ಣೆ ಉತ್ಪಾದನೆ 17 ಶೇಕಡಾ ಹೆಚ್ಚಳವಾಗುವ ನಿರೀಕ್ಷೆಯಿದೆಯೆನ್ನಲಾಗಿದೆ. ಮಲೇಶ್ಯಾದ ಕೆಲವು ಎಣ್ಣೆ ಮಿಲ್‌ಗಳು ಪಾಮೆಣ್ಣೆ ದರ ಕುಸಿತದಿಂದ ತಾತ್ಕಾಲಿಕವಾಗಿ ಪಾಮೆಣ್ಣೆ ತಯಾರಿ ನಿಲುಗಡೆಗೊಳಿಸಿವೆಯೆನ್ನಲಾಗಿದೆ. ಮಿಲ್‌ಗಳು ಪಾಮ್ ಕಾಯಿಗಳನ್ನು ಖರೀದಿ ಮಾಡುತ್ತಿಲ್ಲವೆನ್ನಲಾಗಿದ್ದು, ಇಂಡೋನೇಶಿಯಾದಿಂದ ರಫ್ತು ಹೆಚ್ಚಳವಾಗುತ್ತಿದ್ದು, ಸದ್ಯ ದರ ಸ್ಥಿರವಾಗುವ ಸಾಧ್ಯತೆಯಿದೆ.

## ಜೋಳ ದರ ಸ್ಥಿರ, ಗೋಧಿ ದರ ಹೆಚ್ಚಳ

ದಾಸ್ತಾನುದಾರರಿಂದ ಹಾಗೂ ಮಿಲ್‌ಗಳಿಂದ ಬೇಡಿಕೆ ಹೆಚ್ಚಳವಿದ್ದರೂ ಆವಕವೂ ಹೆಚ್ಚಳವಿದ್ದುದರಿಂದ ಜೋಳ ದರ ಸ್ಥಿರವಿದೆ. ಮಿಲ್‌ಗಳಿಂದ ಹಾಗೂ ದೊಡ್ಡ ಖರೀದಿದಾರರಿಂದ ಬೇಡಿಕೆ ಹೆಚ್ಚಳದಿಂದ ಗೋಧಿ ದರ ಹೆಚ್ಚಳವಾಗಿದೆ.